2016 ಕ.ತೀ.ವ. 681

(ಕಲಬುರುಗಿ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ವಿ. ಚಂದ್ರಶೇಖರ

## ಯುವರಾಜ್ ವಾದ್ವಾಡಗಿ ಮತ್ತು ಇನ್ನೊಬ್ಬರು –ವಿರುದ್ಧ– ಕರ್ನಾಟಕ ರಾಜ್ಯ ಸರ್ಕಾರದ ಅಭಿಯೋಜಕರು, ಇವರಿಂದ ಪ್ರತಿನಿಧಿತ ಮತ್ತು ಇನ್ನೊಬ್ಬರು*

ದಂಡ ಪ್ರಕ್ರಿಯಾ ಸಂಹಿತೆ ಕಲಂ 482 ರಡಿಯಲ್ಲಿ ಕ್ರಿಮಿನಲ್ ಅರ್ಜಿ.

ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡ (ದೌರ್ಜನ್ಯ ನಿರ್ಮೂಲನಾ) ಕಾಯಿದೆ ಕಲಂ 3(1) (X) ರ ಜೊತೆಗೋದಿದಂತೆ ಭಾರತ ದಂಡ ಸಂಹಿತೆ ಕಲಂ 506 ರಡಿಯಲ್ಲಿ ಅರ್ಜಿದಾರರ ವಿರುದ್ಧ ಪ್ರಕರಣದ ಸಂಜ್ಞೇಯತೆಯನ್ನು ತೆಗೆದುಕೊಂಡು, ಅವರ ವಿರುದ್ಧ ಸಮನ್ಸ್ ನೀಡಿದ ಅಧಿವಿಚಾರಣಾ ನ್ಯಾಯಾಲಯದ ಆದೇಶ ಕ್ರಮವನ್ನು ಪ್ರಶ್ನಿಸಿ ಸದರಿ ಅರ್ಜಿ.

ಪ್ರಕರಣದ ಸಂಜ್ಞೇಯುತೆಯುನ್ನು ತೆಗೆದುಕೊಳ್ಳುವಾಗ ಅಧಿವಿಚಾರಣಾ ನ್ಯಾಯಾಲಯವು ಹಲವು ಮುಖ್ಯ ವಸ್ತುನಿಷ್ಠ ವಿಷಯಗಳನ್ನು ಪರಿಗಣಿಸಿರುವುದಿಲ್ಲ. ಫಿರ್ಯಾದನ್ನು ಓದಲಾಗಿ ಶಿಕ್ಷೆಯಾಗುವ ಸಾಧ್ಯತೆಯು ಬಹಳ ವಿರಳವಾಗಿರುತ್ತದೆ. ಈ ಎಲ್ಲಾ ಕಾರಣಗಳಂದ ಸದರಿ ಕ್ರಿಮಿನಲ್ ಅರ್ಜಿಯನ್ನು ಉಚ್ಚ ನ್ಯಾಯಾಲಯವು ಪುರಸ್ಕರಿಸಿದೆ.

*ಕ್ರಿಮಿನಲ್ ಅರ್ಜಿ ಸಂ. 200437/2015 ದಿನಾಂಕ: 16ನೇ ಅಕ್ಟೋಬರ್, 2015

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

1. *(2014) 7 ಎಸ್‌ಸಿಸಿ 215*
   *ರಿಷಿಪಾಲ್ ಸಿಂಗ್ –ವಿರುದ್ಧ–*
   *ಉತ್ತರ ಪ್ರದೇಶ ಸರ್ಕಾರ ಮತ್ತು ಇನ್ನೊಬ್ಬರು* *(ಉಲ್ಲೇ) 12*
2. (2013) 3 ಎಸ್‌ಸಿಸಿ 330
   ರಾಜೀವ್ ಥಾಪರ್ ಮತ್ತು ಇತರರು –ವಿರುದ್ಧ–
   ಮದನ್‌ಲಾಲ್ ಕಪೂರ್ *(ಉಲ್ಲೇ) 13*

ಅರ್ಜಿದಾರರ ಪರ: ಶ್ರೀ ಮನ್ವೇಂದ್ರ ರೆಡ್ಡಿ ಮತ್ತು
ಶ್ರೀ ನಾಗರಾಜ ಪಾಟೀಲ್, ನ್ಯಾಯವಾದಿಗಳು,
1ನೇ ಎದುರುದಾರರ ಪರ: ಶ್ರೀ ಮಕ್ಬೂಲ್ ಅಹಮದ್, ಹೆಚ್‌ಸಿಜಿಪಿ,
2ನೇ ಎದುರುದಾರರ ಪರ: ಶ್ರೀ ಡಿ.ಪಿ. ಅಂಬೇಕರ್, ನ್ಯಾಯವಾದಿ.

**ಆಜ್ಞೆ**

**ನ್ಯಾಯಮೂರ್ತಿ ಶ್ರೀ ಎ.ವಿ. ಚಂದ್ರಶೇಖರ:**

ಪ್ರಸ್ತುತ ಅರ್ಜಿಯನ್ನು, ವಿಜಯಪುರದ 2ನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ಮುಂದಿನ ಪಿಸಿಆರ್ 6/08 ಮೊಕದ್ದಮೆಯಲ್ಲಿ ಪ್ರಾರಂಭಿಸಿದ ಕ್ರಿಮಿನಲ್ ವ್ಯವಹರಣೆಗಳನ್ನು ರದ್ದುಪಡಿಸುವಂತೆ ನ್ಯಾಯಾಲಯವನ್ನು ಕೋರಿ ದಂಡ ಪ್ರಕ್ರಿಯಾ ಸಂಹಿತೆಯ 482 ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಲಾಗಿದೆ. ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡ (ದೌರ್ಜನ್ಯ ಪ್ರತಿಬಂಧ) ಅಧಿನಿಯಮದ (ಇಲ್ಲಿಂದ ಇನ್ನು ಮುಂದೆ ಸಂಕ್ಷಿಪ್ತವಾಗಿ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) ಅಡಿಯಲ್ಲಿ ಉದ್ಭವಿಸಿದ

ಮೊಕದ್ದಮೆಗಳೊಂದಿಗೆ ವ್ಯವಹರಿಸುವ ಮಾನ್ಯ ವಿಶೇಷ ನ್ಯಾಯಾಧೀಶರು ದಿನಾಂಕ 24.01.2015ರ ಆದೇಶದ ಬಲದಿಂದ ಈ ಅರ್ಜಿದಾರರು ಮತ್ತು ಇತರ ಮೂವರ ವಿರುದ್ಧ ಐ.ಪಿ.ಸಿ 506ನೇ ಪ್ರಕರಣದೊಂದಿಗೆ ಓದಿಕೊಂಡಂತೆ ಅಧಿನಿಯಮದ 3(1)(X) ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧಗಳಿಗೆ ಸಂಬಂಧಿಸಿದಂತೆ ಸಂಜ್ಞೇಯತೆಯನ್ನು ತೆಗೆದುಕೊಂಡಿರುತ್ತಾರೆ ಮತ್ತು ಅವರ ಹಾಜರಿಯನ್ನು ಸುನಿಶ್ಚಿತಪಡಿಸುವುದಕ್ಕಾಗಿ ಅವರ ವಿರುದ್ಧ ಆದೇಶಿಕೆಯನ್ನು ಜಾರಿ ಮಾಡಿರುತ್ತಾರೆ. ಈ ಅರ್ಜಿಯಲ್ಲಿ ನಿರೂಪಿಸಿದ ಹಲವಾರು ಕಾರಣಗಳ ಮೇಲೆ ಈ ಆದೇಶವನ್ನು ಈ ಅರ್ಜಿಯಲ್ಲಿ ಪ್ರಶ್ನಿಸಲಾಗಿದೆ.

2. ಇಲ್ಲಿನ 2ನೇ ಎದುರುದಾರ – ವಿಜಯಪುರದಲ್ಲಿ ವಕೀಲಿ ವೃತ್ತಿಯನ್ನು ನಿರ್ವಹಿಸುತ್ತಿರುವ ಕಿಟ್ಟು ಖಾಸಗಿ ದೂರನ್ನು ಸಲ್ಲಿಸುವುದಕ್ಕೆ ಕಾರಣವಾದ ಸಂಗತಿಗಳು ಈ ಕೆಳಕಂಡಂತಿವೆ.

ಎ) 25.10.2008 ರಂದು 2ನೇ ಎದುರುದಾರ – ಕಿಟ್ಟು, ಮೋಟಾರು ಅಪಘಾತಗಳ ಕ್ಲೇಮು ನ್ಯಾಯಾಧಿಕರಣವು ಐತೀರ್ಪು ನೀಡಿದ ಪರಿಹಾರದ ಮೊತ್ತವು ದುರುಪಯೋಗವಾಗಿದೆಯೆಂಬ ಆಪಾದನೆಗೆ ಸಂಬಂಧಿಸಿದಂತೆ ನ್ಯಾಯವಾದಿಗಳಾದ ಎಂ.ಡಿ. ಕುಂಬಾರ್ ವಿರುದ್ಧ ದೂರು ದಾಖಲಿಸಲು ಗಂಗಾಬಾಯಿ ತಲ್ವಾರ್ ಮತ್ತು ಆಕೆಯ ಮಗ ಹಾಗೂ ಸೊಸೆ ಶಾರದಾಳೊಂದಿಗೆ ಮುದ್ದೇಬಿಹಾಳ್ ಪೊಲೀಸ್ ಠಾಣೆಗೆ ಹೋದರು. ಶ್ರೀಮತಿ ಗಂಗಾಬಾಯಿ ಪರವಾಗಿ ದೂರನ್ನು ಸಿದ್ಧಪಡಿಸಿದರು ಮತ್ತು ಅವರು ಅದನ್ನು ಎಸ್‌ಹೆಚ್‌ಓಗೆ ನೀಡಲು ಉದ್ದೇಶಿಸಿದ್ದರು. ಆ ಸಮಯದಲ್ಲಿ, ಪೊಲೀಸ್ ಠಾಣೆಯಲ್ಲಿ ಪಿಎಸ್‌ಐ ಇಲ್ಲದಿದ್ದುದರಿಂದ ಎಸ್‌ಹೆಚ್‌ಓ ದೂರನ್ನು ಸ್ವೀಕರಿಸದೆ ಪಿಎಸ್‌ಐ ಬರುವವರೆಗೆ ಕಾಯುವಂತೆ ತಿಳಿಸಿದರು.

ಬಿ) ಸಂಜೆ ಸುಮಾರು 5.00 ಗಂಟೆಗೆ ಇನ್‌ಸ್ಪೆಕ್ಟರ್ ವೆಂಕನಗೌಡ ಪಾಟೀಲ್ (1ನೇ ಆಪಾದಿತ) ಮತ್ತು ಸಂಗಮೇಶ್ ಪಾಟೀಲ್ (2ನೇ ಆಪಾದಿತ) ಪೊಲೀಸ್ ಠಾಣೆಗೆ ಹಿಂದಿರುಗಿದರು. ಆ ನಂತರ ಫಿರ್ಯಾದಿಯು ಗಂಗಾಬಾಯಿಯೊಂದಿಗೆ

2ನೇ ಆಪಾದಿತ – ಪಿಎಸ್ಐ ಚೇಂಬರ್‌ಗೆ ಹೋಗಿ ತಾವು ಬೆಳಿಗ್ಗೆ 11.00 ಗಂಟೆಯಿಂದ ಕಾಯುತ್ತಿರುವುದಾಗಿ ತಿಳಿಸಿ ಪ್ರಕರಣವನ್ನು ದಾಖಲಿಸಿಕೊಳ್ಳುವಂತೆ ಕೋರಿದರು. ಅದಕ್ಕೆ ಸಂಗಮೇಶ ಪಾಟೀಲ್ ಪದೇ ಪದೇ ಎಂವಿಸಿ ಮೊಕದ್ದಮೆಗಳಿಗಾಗಿ ವೃತ್ತಿನಿರತ ನ್ಯಾಯವಾದಿಯಾಗಿರುವ ಎಂ.ಡಿ. ಕುಂಬಾರ್ ಬಳಿ ಹೋಗಬೇಕಾಗುವುದರಿಂದ ಅವರ ವಿರುದ್ಧ ಪ್ರಕರಣವನ್ನು ದಾಖಲು ಮಾಡಿಕೊಳ್ಳಲು ಸಾಧ್ಯವಿಲ್ಲವೆಂದು ಹೇಳಿದರು. ಕುಂಬಾರ್‌ರನ್ನು ಮೊದಲು ವಿಚಾರಣೆ ಮಾಡಬೇಕೆಂದು ಅವರಿಗೆ ತಿಳಿಸಿ ಆನಂತರ ಪ್ರಕರಣವನ್ನು ದಾಖಲಿಸಿಕೊಳ್ಳುವಂತೆ ಪಿಎಸ್ಐ ಗೆ ತಿಳಿಸಲಾಯಿತು.

ಸಿ) ಅದರಂತೆ, ಎಂ.ಡಿ. ಕುಂಬಾರ್ (3ನೇ ಆಪಾದಿತ) ರನ್ನು ತಮ್ಮ ಮೊಬೈಲ್ ಫೋನ್‌ನಿಂದ ಸಂಪರ್ಕಿಸಿ ಪೊಲೀಸ್ ಠಾಣೆಗೆ ಬರುವಂತೆ ಅವರನ್ನು ಕೇಳಿಕೊಳ್ಳಬೇಕೆಂದು ಸಂಗಮೇಶ್ ಪಾಟೀಲ್‌ಗೆ (2ನೇ ಆಪಾದಿತ) ಕೋರಲಾಯಿತು. ಅದರಂತೆ ಅವರು ಬಂದರು ಮತ್ತು **612450/–** ರೂ.ಗಳ ಮೊತ್ತವನ್ನು ಮುದ್ದೇಬಿಹಾಳದ ಸೌಹಾರ್ದ ಸಹಕಾರೀ ಬ್ಯಾಂಕಿನ ಗಂಗಾಬಾಯಿ ಖಾತೆಗೆ ಜಮೆ ಮಾಡಲಾಗಿದೆ ಎಂದು ಪಿಎಸ್ಐಗೆ ತಮ್ಮ ಹೇಳಿಕೆಯನ್ನು ನೀಡಿದರು. ಆನಂತರ ಅವರ ವಿರುದ್ಧ ಪ್ರಕರಣವನ್ನು ದಾಖಲಿಸದಿರುವಂತೆ ಮಾಡುವ ಸಲುವಾಗಿ ಐತೀರ್ಪು ನೀಡಿದ ಪರಿಹಾರದ ಮೊತ್ತದಲ್ಲಿ ಶೇ. 15 ರಷ್ಟನ್ನು ಮಾತ್ರವೇ ಕುಂಬಾರರು ಕಡಿತ ಮಾಡಿಕೊಂಡು ಉಳಿದ ಮೊತ್ತವನ್ನು ತನಗೆ ಸಂದಾಯ ಮಾಡಿದ್ದಾರೆಂದು ಪಿಎಸ್ಐಗೆ ತಿಳಿಸುವಂತೆ ಗಂಗಾಬಾಯಿಗೆ ಹೇಳಲಾಯಿತು.

ಡಿ) ಆ ಸಂದರ್ಭದಲ್ಲಿ 3ನೇ ಆಪಾದಿತ–ಕುಂಬಾರ್ ಫಿರ್ಯಾದಿ–ಕಿಟ್ಟುವನ್ನು ಆತನು ಲಂಬಾಣಿ ಜಾತಿಗೆ (ಅನುಸೂಚಿತ ಜಾತಿಯಲ್ಲಿನ ಒಂದು ವರ್ಗ) ಸೇರಿದವನೆಂದು ಜಾತಿಯ ಹೆಸರನ್ನೆತ್ತಿ ಬಯ್ದಿದ್ದಾರೆಂದು ಮತ್ತು ದೂರನ್ನು ದಾಖಲಿಸಲು ಗಂಗಾಬಾಯಿ ಮತ್ತು ಆಕೆಯ ಕುಟುಂಬ ಸದಸ್ಯರು ಹಾಗೂ ಇತರರನ್ನು ಕರೆತರುವುದಕ್ಕೆ ಹೇಗೆ ಧೈರ್ಯ ಬಂತು ಎಂದು ಕೇಳಿದರೆಂದು ಆಪಾದಿಸಲಾಗಿದೆ. ಪೊಲೀಸ್ ಠಾಣೆಯಿಂದ ಹೊರಬಂದ ನಂತರ ಫಿರ್ಯಾದಿಗೆ ಘೋರ ಪರಿಣಾಮಗಳನ್ನು

ಎದುರಿಸಬೇಕಾಗುತ್ತದೆಂದು ಬೆದರಿಕೆಯೊಡ್ಡಿರುತ್ತಾರೆಂದು ಹೇಳಲಾಗಿದೆ. ಆ ನಂತರ ಈ ಅರ್ಜಿದಾರರು ಕೂಡ ಫಿರ್ಯಾದಿಯನ್ನು ಲಂಬಾಣಿ ಜಾತಿಯವನೆಂದು ಅವನ ಜಾತಿಯ ಹೆಸರೆತ್ತಿ ನಿಂದಿಸಿ ತಮ್ಮದೇ ಊರಾದ ಮುದ್ದೇಬಿಹಾಳದಲ್ಲಿ ತಮ್ಮ ವಿರುದ್ಧವೇ ದೂರು ನೀಡಲು ನಿನಗೆ ಹೇಗೆ ಧೈರ್ಯಬಂತು ಎಂದು ಬೆದರಿಸಿರುತ್ತಾರೆಂದು ಹೇಳಲಾಗಿದೆ.

ಇ) ಇಂಥ ಒಂದು ಘಟನೆ ಪೊಲೀಸ್ ಠಾಣೆಯಲ್ಲಿಯೇ ನಡೆದಿದ್ದರೂ, ಪಿಎಸ್ಐ ಆಗಲಿ ಅಥವಾ 2ನೇ ಆಪಾದಿತ ಸಂಗಮೇಶ್ ಪಾಟೀಲ್ ಆಗಲಿ ಪ್ರಕರಣವನ್ನು ದಾಖಲಿಸಿಕೊಳ್ಳಲಿಲ್ಲ ಬದಲಾಗಿ ಅವರು 3 ರಿಂದ 5 ರವರೆಗಿನ ಆಪಾದಿತರೊಂದಿಗೆ ಕೈಜೋಡಿಸಿದರು. ಆದ್ದರಿಂದ ಫಿರ್ಯಾದಿಯು 28.08.2008 ರಂದು ವಿಶೇಷ ನ್ಯಾಯಾಲಯದ ಮುಂದೆ ದಂಡ ಪ್ರಕ್ರಿಯಾ ಸಂಹಿತೆಯ 2(ಡಿ) ಪ್ರಕರಣದ ಅಡಿಯಲ್ಲಿ ದೂರು ದಾಖಲಿಸಿದರು.

3. ಸಂಜ್ಞೇಯತೆಯನ್ನು ತೆಗೆದುಕೊಂಡ ನಂತರ, 01.10.2009 ರಂದು ಫಿರ್ಯಾದಿ–ಕಿಟ್ಟು ಅವರ ಪ್ರತಿಜ್ಞಾ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಯಿತು ಆ ನಂತರ ಅಂತಿಮವಾಗಿ 24.01.2015 ರಂದು ಪ್ರಶ್ನಿತ ಆದೇಶವನ್ನು ಹೊರಡಿಸಲಾಯಿತು. ಆದೇಶದ ಜಾರಿ ಭಾಗವು ಈ ಕೆಳಕಂಡಂತಿದೆ:

ಆದೇಶ

> "1 ರಿಂದ 5 ರವರೆಗಿನ ಆಪಾದಿತರ ವಿರುದ್ಧ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡ (ದೌರ್ಜನ್ಯ ಪ್ರತಿಬಂಧ) ಅಧಿನಿಯಮದ 3(1) (X) ಪ್ರಕರಣದ ಹಾಗೂ ಭಾರತ ದಂಡ ಸಂಹಿತೆಯ 506 ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧಗಳಿಗಾಗಿ ಸಂಜ್ಞೇಯತೆಯನ್ನು ತೆಗೆದುಕೊಳ್ಳಲಾಗಿದೆ.

ಫಿರ್ಯಾದಿಯು ಸಾಕ್ಷಿದಾರರ ಪಟ್ಟಿಯನ್ನು ಸಲ್ಲಿಸಿದುದರ ಮೇಲೆ 1 ರಿಂದ 5 ರವರೆಗಿನ ಆಪಾದಿತರ ವಿರುದ್ಧ ಆದೇಶಿಕೆಯನ್ನು ಜಾರಿ ಮಾಡಲಾಗಿದೆ.

28.02.2015 ರೊಳಗೆ ಪ್ರತಿಕ್ರಯಿಸಬೇಕಾಗಿರುತ್ತದೆ.

ದೂರನ್ನು ದಂಡ ಪ್ರಕ್ರಿಯಾ ಸಂಹಿತೆಯ 203ನೇ ಪ್ರಕರಣದ ಅಡಿಯಲ್ಲಿ 6ನೇ ಆಪಾದಿತನ ವಿರುದ್ಧ ವಜಾಗೊಳಿಸಲಾಗಿದೆ".

4. ಅರ್ಜಿದಾರರ ಪರ ವಾದವೇನೆಂದರೆ, ಸೆಷನ್ಸ್ ನ್ಯಾಯಾಧೀಶರು ಈ ಅರ್ಜಿದಾರರಿಗೆ ಆದೇಶಿಕೆಯನ್ನು ಜಾರಿಮಾಡಿ ಹೊರಡಿಸಿದ ಆದೇಶವು ಮೊಕದ್ದಮೆಯ ಸಂಗತಿಗಳಿಗೆ ವಿರುದ್ಧವಾದುದಾಗಿದೆ ಮತ್ತು ಮಾನ್ಯ ನ್ಯಾಯಾಧೀಶರು ದೂರನ್ನು ಸಲ್ಲಿಸಿರುವ ರೀತಿ ಮತ್ತು ಕಿಟ್ಟುನಂತಹ ವಿದ್ಯಾವಂತ ವ್ಯಕ್ತಿಯು ನ್ಯಾಯಾಲಯಕ್ಕೆ ದೂರು ಸಲ್ಲಿಸುವಲ್ಲಿ ಮಿತಿಮೀರಿದ ವಿಳಂಬಮಾಡಿರುವುದನ್ನು ಗಮನಕ್ಕೆ ತೆಗೆದುಕೊಂಡಿಲ್ಲ. ಗಂಗಾಬಾಯಿ ಸಲ್ಲಿಸಿದ ದೂರನ್ನು ಆಧರಿಸಿ, ಎಂವಿಸಿ 311/03 ದಿಂದ ಬಂದ ಪರಿಹಾರದ ಮೊತ್ತವನ್ನು ಸಂದಾಯ ಮಾಡದಿರುವುದಕ್ಕೆ ಸಂಬಂಧಿಸಿದ ಅದೇ ಆಪಾದನೆಯ ಮೇಲೆ ಈ ಅರ್ಜಿದಾರರು ಮತ್ತು ಬ್ಯಾಂಕ್ ಮ್ಯಾನೇಜರರ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಲಾಗಿತ್ತು ಮತ್ತು 2ನೇ ಎದುರುದಾರನೇ ಸದರಿ ದೂರಿನ ಕರಡನ್ನು ತಯಾರಿಸಿದ್ದನು ಆದರೆ ಗಂಗಾಬಾಯಿಯು ಸಲ್ಲಿಸಿದ ದೂರಿನಲ್ಲಿ ಮಾಡಿದ ಆಪಾದನೆಗಳ ಬಗ್ಗೆ ಅಲ್ಲಿ ಒಂದು ಪಿಸುಮಾತೂ ಕೂಡ ಇರಲಿಲ್ಲವೆಂಬುದು ಅರ್ಜಿದಾರರ ಪರ ವಾದವಾಗಿದೆ. ಅಲ್ಲದೆ, ಸದರಿ ಮೊಕದ್ದಮೆಯಲ್ಲಿ 'ಬಿ' ವರದಿ ಸಲ್ಲಿಸಲಾಗಿತ್ತು ಮತ್ತು ಶ್ರೀಮತಿ ಗಂಗಾಬಾಯಿ ಪ್ರತಿವಾದದ ಹೇಳಿಕೆಯ ಮೆಮೋ ಸಲ್ಲಿಸಿದ್ದರೂ ಮೊಕದ್ದಮೆಯನ್ನು ಮುಕ್ತಾಯಗೊಳಿಸಲಾಗಿತ್ತೆಂದು ತಿಳಿಸಲಾಗಿದೆ.

5. ಕಿಟ್ಟು ಖಾಸಗಿ ದೂರು ಸಲ್ಲಿಸಿರುವುದರಲ್ಲಿ ಕಾನೂನಿನ ಪ್ರಕ್ರಿಯೆಯನ್ನು ನಿಂದಿಸಿರುವುದನ್ನು ಬಿಟ್ಟರೆ ಅದರಲ್ಲಿ ಬೇರೇನೂ ಇಲ್ಲ, ಹಾಗಾಗಿ ಅದು ರದ್ದಾಗುವುದಕ್ಕೆ ತಕ್ಕದ್ದಾಗಿದೆಯೆಂದು ವಾದಿಸಲಾಗಿದೆ.

6. ಅದಕ್ಕೆ ವ್ಯತಿರಿಕ್ತವಾಗಿ, 2ನೇ ಎದುರುದಾರನನ್ನು ಪ್ರತಿನಿಧಿಸಿದ ಮಾನ್ಯ ಹೆಚ್‌ಸಿಜಿಪಿ, ಶ್ರೀ ಮಕ್ಬೂಲ್ ಅಹಮ್ಮದ್ ಮತ್ತು ಶ್ರೀ ಅಂಬೇಕರ್ ಅವರು ವಾದಿಸಿ, ಮಾನ್ಯ ನ್ಯಾಯಾಧೀಶರು ಪ್ರತಿಜ್ಞಾ ಹೇಳಿಕೆಯನ್ನಾಧರಿಸಿ ಸಂಜ್ಞೇಯತೆಯನ್ನು ತೆಗೆದುಕೊಂಡು ಅರ್ಜಿದಾರರಿಗೆ ಸಮನು ನೀಡಿರುವುದು ಸರಿಯಾಗಿಯೇ ಇದೆಯೆಂದು ಹೇಳಿದ್ದಾರೆ. ಮಾನ್ಯ ವಿಶೇಷ ನ್ಯಾಯಾಧೀಶರು ಹೊರಡಿಸಿದ ಸೂಕ್ತ ಪರಿಗಣಿತ ಆದೇಶದಲ್ಲಿ ಮಧ್ಯಪ್ರವೇಶಿಸಲು ಸೂಕ್ತ ಕಾರಣಗಳು ರೂಪಿತವಾಗಿಲ್ಲವೆಂದು ಅವರು ವಾದಿಸಿದ್ದಾರೆ.

7. ವಿಶೇಷ ನ್ಯಾಯಾಲಯದಿಂದ ಪಿಸಿಆರ್ 6/08ರ ದಾಖಲೆಗಳನ್ನು ತರಿಸಿಕೊಳ್ಳಲಾಗಿದೆ. ಅವುಗಳನ್ನು ಪರಿಶೀಲಿಸಲಾಗಿದೆ.

8. ಈ ಅರ್ಜಿದಾರರ ವಿರುದ್ಧದ ಕ್ರಿಮಿನಲ್ ವ್ಯವಹರಣೆಗಳನ್ನು ವಜಾಗೊಳಿಸುವುದಕ್ಕೆ ದಂಡ ಪ್ರಕ್ರಿಯಾ ಸಂಹಿತೆಯ 482 ನೇ ಪ್ರಕರಣದ ಅಡಿಯಲ್ಲಿ ನ್ಯಾಯಾಲಯಕ್ಕೆ ನಿಹಿತವಾಗಿರುವ ವಿಶೇಷ ಅಧಿಕಾರವನ್ನು ಬಳಸಲು ಪ್ರಸ್ತುತ ಮೊಕದ್ದಮೆಯು ಸೂಕ್ತವಾದುದಾಗಿದೆಯೇ ಎಂಬುದು ಇಲ್ಲಿನ ಪ್ರಶ್ನೆಯಾಗಿದೆ.

9. ವಿಶೇಷ ನ್ಯಾಯಾಲಯದಿಂದ ತರಿಸಿಕೊಂಡ ದಾಖಲೆಗಳು, 25.10.2008 ರಂದು ಸಂಜೆ 4.30 ಗಂಟೆಗೆ ಗಂಗಾಬಾಯಿ ತಲ್ವಾರ್ ದಾಖಲಿಸಿದ ಪ್ರಥಮ ಮಾಹಿತಿಯನ್ನಾಧರಿಸಿ ಮುದ್ದೇಬಿಹಾಳ್ ಪೊಲೀಸ್ ಠಾಣೆಯ ಪಿಎಸ್‌ಐ ದಂಡ ಪ್ರಕ್ರಿಯಾ ಸಂಹಿತೆಯ 504, 506 ಮತ್ತು 420 ಪ್ರಕರಣಗಳ ಅಡಿಯಲ್ಲಿ ದಂಡನೀಯವಾದ ಅಪರಾಧಗಳಿಗಾಗಿ 3ನೇ ಆಪಾದಿತ – ಎಂ.ಡಿ. ಕುಂಬಾರ್ ಮತ್ತು ಸೌಹಾರ್ದ ಸಹಕಾರ ಬ್ಯಾಂಕಿನ ಬ್ಯಾಂಕ್ ವ್ಯವಸ್ಥಾಪಕನ ವಿರುದ್ಧ ಕ್ರೈಂ

ಸಂ. 252/08 ರಲ್ಲಿ ಮೊಕದ್ದಮೆಯನ್ನು ದಾಖಲಿಸಿಕೊಂಡಿದ್ದಾನೆಂಬುದನ್ನು ತಿಳಿಸುತ್ತವೆ. ಹಾಗೆ ದಾಖಲಿಸಲಾದ ಪ್ರಥಮ ಮಾಹಿತಿಯು 8 ಪುಟಗಳಷ್ಟಿದೆ ಮತ್ತು ಅದರ ಕರ್ತೃ ಕಿಟ್ಟು ಫಿರ್ಯಾದಿ ಅಲ್ಲದೆ ಬೇರೆ ಯಾರು ಅಲ್ಲ. ಗಂಗಾಬಾಯಿಯು 25.10.2008 ರಂದು ಸಂಜೆ 4.30 ಗಂಟೆಗೆ ದಾಖಲಿಸಿದ, ಕಿಟ್ಟು ಬರೆದಿರುವ ಪ್ರಥಮ ಮಾಹಿತಿಯ ಒಳಾಂಶಗಳನ್ನು ಪರಿಶೀಲಿಸಿದ ಮೇಲೆ, ಆಕೆಯ ಮಗನ ಸಾವಿಗೆ ಸಂಬಂಧಿಸಿದಂತೆ ಎಂಎಸಿಟಿಯು ಐತೀರ್ಪು ನೀಡಿದ ಪರಿಹಾರದ ಮೊತ್ತವನ್ನು ದುರುಪಯೋಗಪಡಿಸಿಕೊಳ್ಳಲಾಗಿದೆಯೆಂದು ಆಪಾದಿಸಿರುವುದಕ್ಕೆ ಮತ್ತು 2ನೇ ಆಪಾದಿತನು ಹಾಗೂ ಸೌಹಾರ್ದ ಸಹಕಾರೀ ಬ್ಯಾಂಕಿನ ವ್ಯವಸ್ಥಾಪಕನು ಒಟ್ಟಾಗಿ ಒಳಸಂಚು ನಡೆಸಿ ಆ ಮೊತ್ತವನ್ನು ನಗದೀಕರಿಸಿಕೊಳ್ಳಲಾಗಿದೆಯೆಂದು ಆಪಾದಿಸಿರುವುದಕ್ಕೆ ಸಂಬಂಧಿಸಿದಂತೆ ಇಡೀ ಆಪಾದನೆಯು ಮೂರನೇ ಆಪಾದಿತ ಕುಂಬಾರನ ವಿರುದ್ಧವೇ ಇರುವುದು ಕಂಡು ಬರುತ್ತದೆ.

10. ಗಂಗಾಬಾಯಿಯು 25.10.2008 ರಂದು ಸಂಜೆ 4.30 ಗಂಟೆಗೆ ದಾಖಲಿಸಿದ ವಿವರವಾದ ಪ್ರಥಮ ಮಾಹಿತಿಯಲ್ಲಿ, ಕಿಟ್ಟುವಿನ ಜಾತಿ ಹೆಸರೆತ್ತಿ ಮಾತನಾಡಿ ಅಥವಾ ಆತನಿಗೆ ಘೋರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆಂದು ಜೀವ ಬೆದರಿಕೆ ಹಾಕಿ ಈ ಅರ್ಜಿದಾರರು ಆತನ ವಿರುದ್ಧ ಮಾಡಿದ್ದಾರೆನ್ನಲಾದ ದೌರ್ಜನ್ಯದ ಬಗ್ಗೆ ಒಂದಿಷ್ಟೂ ಉಲ್ಲೇಖವಿಲ್ಲ.

11. ಗಂಗಾಬಾಯಿಯು ದಾಖಲಿಸಿದ ಪ್ರಥಮ ಮಾಹಿತಿಯನ್ನಾಧರಿಸಿ ದಾಖಲಾದ ಕ್ರೈಂ ಸಂ. 252/08 ಕ್ರಿಮಿನಲ್ ಮೊಕದ್ದಮೆಯು 'ಬಿ' ವರದಿ ಸಲ್ಲಿಸುವುದಕ್ಕೆ ಕಾರಣವಾಗಿ ಅದನ್ನು ಅಂಗೀಕರಿಸುವ ಮೂಲಕ ಮೊಕದ್ದಮೆಯು ಮುಕ್ತಾಯಗೊಂಡಿತೆಂಬುದನ್ನು ಅರ್ಜಿಯಲ್ಲಿ ನಿರ್ಧಿಷ್ಟವಾಗಿ ತಿಳಿಸಲಾಗಿದೆ. ಈ ವಾಸ್ತವ ಸಂಗತಿಯನ್ನು ಈ ನ್ಯಾಯಾಲಯದ ಮುಂದೆ 2ನೇ ಆಪಾದಿತನನ್ನು ಪ್ರತಿನಿಧಿಸುವ ಮಾನ್ಯ ನ್ಯಾಯವಾದಿಯು ಅಲ್ಲಗಳೆದಿರುವುದಿಲ್ಲ.

12. ಸಾಮಾನ್ಯವಾಗಿ ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಅಡಿಯಲ್ಲಿ ಅಧಿಕಾರವು ನಿಹಿತವಾಗಿರುವ ಈ ನ್ಯಾಯಾಲಯವು, ದಂಡ ಪ್ರಕ್ರಿಯಾ

ಸಂಹಿತೆಯ 204 ನೇ ಪ್ರಕರಣದ ಅಡಿಯಲ್ಲಿ ಉದ್ದೇಶಿಸಿದಂತೆ ಆದೇಶಿಕೆಯನ್ನು ಜಾರಿ ಮಾಡುವ ಸಂಬಂಧದಲ್ಲಿ ನ್ಯಾಯಾಲಯವು ತೆಗೆದುಕೊಂಡ ನಿರ್ಣಯದ ಮೇಲೆ ಕೂರಬಾರದು. ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಅಡಿಯಲ್ಲಿನ ಅಧಿಕಾರವು ಕಾನೂನು ಪ್ರಕ್ರಿಯೆಯ ನಿಂದನೆಯನ್ನು ತಡೆದು ನ್ಯಾಯವನ್ನು ಸುನಿಶ್ಚಿತಪಡಿಸುವುದಾಗಿದೆ. ಉಚ್ಚ ನ್ಯಾಯಾಲಯವು ಸಾಮಾನ್ಯವಾಗಿ ಸೂಕ್ಷ್ಮ ವಿವೇಚನೆಯುಳ್ಳದ್ದಾಗಿರಬೇಕು ಮತ್ತು ಪ್ರತಿಯೊಂದು ಮೊಕದ್ದಮೆಯ ವಾಸ್ತವ ಸಂಗತಿಗಳು ಮತ್ತು ಪರಿಸ್ಥಿತಿಗಳನ್ನು ಆಧರಿಸಿ ವಿಶೇಷ ಸಂದರ್ಭಗಳಲ್ಲಿ ಮಾತ್ರವೇ ಆ ಅಧಿಕಾರವನ್ನು ಚಲಾಯಿಸಬೇಕು. ಕ್ರಿಮಿನಲ್ ಪ್ರಾಸಿಕ್ಯೂಷನ್‌ಗೆ ಕಾರಣವಾದ ಆಪಾದನೆಯು ಮೇಲ್ನೋಟಕ್ಕೆ ಒಂದು ಅಪರಾಧವನ್ನು ಹೊರಗೆಡಹದಿದ್ದರೆ ಅಥವಾ ರೂಪಿಸದಿದ್ದರೆ ಆಗ, ದಂಡ ಪ್ರಕ್ರಿಯಾ ಸಂಹಿತೆಯ 482 ನೇ ಪ್ರಕರಣದ ಅಡಿಯಲ್ಲಿನ ಅಧಿಕಾರವನ್ನು ಚಲಾಯಿಸಬಹುದಾಗಿದೆ. ಆದರೆ, ಸಂಗತಿಯ ಪ್ರಶ್ನೆಯನ್ನು ಪ್ರಶ್ನಿಸುವುದನ್ನು ಅಧಿವಿಚಾರಣಾ ನ್ಯಾಯಾಲಯದಂತೆ ನಿರ್ಣಯಿಸಲಾಗದು. ***ರಿಷಿಪಾಲ್ ಸಿಂಗ್ –ವಿರುದ್ಧ– ಉತ್ತರ ಪ್ರದೇಶ ಸರ್ಕಾರ ಮತ್ತು ಇನ್ನೊಬ್ಬರು*** [1], ಮೊಕದ್ದಮೆಯಲ್ಲಿ ನ್ಯಾಯಾಲಯವು ಹತಾಶೆಗೊಂಡ ವ್ಯಾಜ್ಯಕಾರನು ಕಾನೂನು ಪ್ರಕ್ರಿಯೆಯನ್ನು ನಿಂದಿಸುವ ಮೂಲಕ ತನ್ನಲ್ಲಿರುವ ಕೋಪವನ್ನು ಕಾರಿಕೊಳ್ಳುವುದಕ್ಕೆ ಅನುಮತಿ ನೀಡುವ ಅಗತ್ಯವಿಲ್ಲ ಮತ್ತು ಅಂಥ ವ್ಯವಹರಣೆಗಳನ್ನು ಆರಂಭಿಕ ಹಂತದಲ್ಲಿಯೇ ನಿಲ್ಲಿಸಬೇಕಾದ ಅಗತ್ಯವಿರುತ್ತದೆಯೆಂದು ನಿರ್ಣಯಿಸಿದೆ.

13. ***ರಾಜೀವ್ ಥಾಪರ್ ಮತ್ತು ಇತರರು –ವಿರುದ್ಧ– ಮದನ್‌ಲಾಲ್ ಕಪೂರ್*** [2], ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು, ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಅಡಿಯಲ್ಲಿ ಉಚ್ಚ ನ್ಯಾಯಾಲಯದ ಮುಂದೆ ಆಪಾದಿತನ ವಿರುದ್ಧ ಕೈಗೊಂಡಿರುವ ವ್ಯವಹರಣೆಗಳನ್ನು ವಜಾಗೊಳಿಸುವಂತೆ ಕೋರಿದ ಕೋರಿಕೆಯ ಸತ್ಯಾಸತ್ಯತೆಯನ್ನು ನಿರ್ಣಯಿಸುವ ಸಲುವಾಗಿ ಅನುಸರಿಸಬೇಕಾದ ಕ್ರಮಗಳಿಗೆ ಸಂಬಂಧಿಸಿದಂತೆ ವಿಸ್ತೃತ ಮಾರ್ಗಸೂಚಿಗಳನ್ನು ರೂಪಿಸಿದೆ. ಅದರ

1. (2014) 7 ಎಸ್‌ಸಿಸಿ 215
2. (2013) 3 ಎಸ್‌ಸಿಸಿ 330

ಸಂಬಂಧಪಟ್ಟ ಭಾಗವು ತೀರ್ಪಿನ 348ನೇ ಪುಟದಲ್ಲಿ 30 ರಿಂದ 30.5 ರವರೆಗಿನ ಪ್ಯಾರಾಗ್ರಾಫ್‌ಗಳಲ್ಲಿದ್ದು ಅದನ್ನು ಈ ಕೆಳಗೆ ಉದ್ಧರಿಸಲಾಗಿದೆ:

> "30. ಹಿಂದೆ ಹೇಳಿದ ಪ್ಯಾರಾಗ್ರಾಫ್‌ಗಳಲ್ಲಿ ಕಂಡುಬಂದ ಸಂಗತಿಗಳನ್ನಾಧರಿಸಿ, ನಾವು ದಂಡ ಪ್ರಕ್ರಿಯಾ ಸಂಹಿತೆಯ 482 ನೇ ಪ್ರಕರಣದ ಅಡಿಯಲ್ಲಿ ಉಚ್ಚ ನ್ಯಾಯಾಲಯದಲ್ಲಿ ನಿಹಿತವಾದ ಅಧಿಕಾರವನ್ನು ಬಳಸುವ ಮೂಲಕ, ರದ್ದುಪಡಿಸುವುದಕ್ಕಾಗಿ ಆಪಾದಿತನು ಕೋರಿದ ಕೋರಿಕೆಯ ಸತ್ಯಾಸತ್ಯತೆಯನ್ನು ನಿರ್ಣಯಿಸಲು ಈ ಕೆಳಕಂಡ ಕ್ರಮಗಳನ್ನು ರೂಪಿಸಿದ್ದೇವೆ:–
>
> 30.1 ಕ್ರಮ ಒಂದು: ಆಪಾದಿತನು ಆಧಾರ ವಾಗಿಟ್ಟುಕೊಂಡ ಸಾಕ್ಷ್ಯಾಧಾರವು ಪ್ರಬಲವಾದ, ಯುಕ್ತವಾದ ಮತ್ತು ನಿಸ್ಸಂದೇಹವಾದ ಸಾಕ್ಷ್ಯಾಧಾರವಾಗಿದೆಯೇ ಎಂದರೆ, ಆ ಸಾಕ್ಷ್ಯಾಧಾರವು ಉತ್ತಮ ಮತ್ತು ವಿಶ್ವಾಶನೀಯ ಗುಣಗಳುಳ್ಳದ್ದಾಗಿದೆಯೇ?
>
> 30.2 ಕ್ರಮ ಎರಡು: ಆಪಾದಿತನು ಆಧಾರವಾಗಿಟ್ಟುಕೊಂಡಿರುವ ಸಾಕ್ಷ್ಯಾಧಾರವು ಆಪಾದಿತನ ವಿರುದ್ಧ ಹೊರಿಸಿದ ಆರೋಪಗಳಲ್ಲಿರುವ ಪ್ರತಿಪಾದನೆಗಳನ್ನು ಅಲ್ಲಗಳೆಯುತ್ತದೆಯೇ, ಎಂದರೆ, ಆ ಸಾಕ್ಷ್ಯಾಧಾರವು ದೂರಿನಲ್ಲಿ ಒಳಗೊಂಡಿರುವ ವಾಸ್ತವಾಂಶದ ಹೇಳಿಕೆಗಳನ್ನು ನಿರಾಕರಿಸಲು ಮತ್ತು ಅಲ್ಲಗಳೆಯಲು ಸಮರ್ಥವಾಗಿದೆಯೇ, ಎಂದರೆ, ಆ ಸಾಕ್ಷ್ಯಾಧಾರವು ಆಪಾದನೆಗಳ ವಾಸ್ತವ ಸಂಗತಿಯ ಆಧಾರವನ್ನು ಸುಳ್ಳೆಂದು ತಿರಸ್ಕರಿಸಲು ಮತ್ತು ದೂಷಿಸಲು ಒಬ್ಬ ಸೂಕ್ತ ವ್ಯಕ್ತಿಯು ಮನವೊಲಿಸುವಂತಿದೆಯೇ?

30.3 ಕ್ರಮ ಮೂರು: ಆಪಾದಿತನು ಆಧಾರವಾಗಿಟ್ಟುಕೊಂಡ ಸಾಕ್ಷ್ಯಾಧಾರವನ್ನು ಪ್ರಾಸಿಕ್ಯೂಷನ್ / ಫಿರ್ಯಾದಿಯು ಖಂಡಿಸಿಲ್ಲವೇ; ಮತ್ತು / ಅಥವಾ ಆ ಸಾಕ್ಷ್ಯಾಧಾರವು ಪ್ರಾಸಿಕ್ಯೂಷನ್ / ಫಿರ್ಯಾದಿಯು ಖಂಡಿಸುವುದು ಸಮರ್ಥನೀಯವಲ್ಲದಂತೆ ಇದೆಯೇ?

30.4 ಕ್ರಮ ನಾಲ್ಕು: ಅಧಿವಿಚಾರಣೆಯಲ್ಲಿನ ವ್ಯವಹರಣೆಯು ನ್ಯಾಯಾಲಯ ಪ್ರಕ್ರಿಯೆಯನ್ನು ದೂಷಿಸುವುದಕ್ಕೆ ಕಾರಣವಾಗುತ್ತದೆಯೇ ಮತ್ತು ಅದು ನ್ಯಾಯೋದ್ದೇಶಗಳನ್ನು ಈಡೇರಿಸುವುದಿಲ್ಲವೇ?

30.5 ಮೇಲಿನ ಎಲ್ಲಾ ಕ್ರಮಗಳಿಗೆ ಉತ್ತರ ‘ಹೌದು’ ಎಂದಾದರೆ, ಉಚ್ಚ ನ್ಯಾಯಾಲಯದ ನ್ಯಾಯಿಕ ವಿವೇಚನೆಯು, ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಅಡಿಯಲ್ಲಿ ಅದಕ್ಕೆ ನಿಹಿತವಾದ ಅಧಿಕಾರವನ್ನು ಚಲಾಯಿಸುವಲ್ಲಿ ಅಂಥ ಕ್ರಿಮಿನಲ್ ವ್ಯವಹರಣೆಗಳನ್ನು ರದ್ದುಪಡಿಸುವುದಕ್ಕೆ ಅದನ್ನು ಪ್ರೇರೇಪಿಸಬೇಕು. ಅಂಥ ಅಧಿಕಾರ ಚಲಾವಣೆಯು ಆಪಾದಿತನಿಗೆ ನ್ಯಾಯ ಒದಗಿಸುವುದರ ಜೊತೆಗೆ, ನ್ಯಾಯಾಲಯದ ಅಮೂಲ್ಯ ಸಮಯವನ್ನು ಉಳಿಸುತ್ತದೆ, ಇಲ್ಲವಾದರೆ, ಅಂಥ ಅಧಿವಿಚಾರಣೆಯನ್ನು (ಮತ್ತು ಅದರಿಂದ ಉದ್ಭವವಾಗುವ ವ್ಯವಹರಣೆಗಳನ್ನು) ನಡೆಸುವುದು ವ್ಯರ್ಥವಾಗುತ್ತದೆ, ಏಕೆಂದರೆ ಅದು ಅಂತಿಮವಾಗಿ, ಆಪಾದಿತನನ್ನು ಅಪರಾಧನಿರ್ಣೀತನನ್ನಾಗಿ ಮಾಡುವುದಿಲ್ಲವೆಂಬುದು ಸ್ಪಷ್ಟವಾಗಿರುತ್ತದೆ”.

14. ಈ ಮೊಕದ್ದಮೆಯಲ್ಲಿ ಫಿರ್ಯಾದಿ–ಕಿಟ್ಟುವಿನ ವರ್ತನೆಯನ್ನು ಪರಿಶೀಲಿಸಬೇಕಾಗುತ್ತದೆ. ಕ್ರೈಂ ನಂ. 252/08 ರಲ್ಲಿ ಎಂ.ಡಿ. ಕುಂಬಾರ್ (3ನೇ ಆಪಾದಿತ) ಮತ್ತು ಸೌಹಾರ್ದ ಸಹಕಾರೀ ಬ್ಯಾಂಕಿನ ವ್ಯವಸ್ಥಾಪಕರ ವಿರುದ್ಧ ಯಾವ ಆಧಾರದ ಮೇಲೆ ಮೊಕದ್ದಮೆಯನ್ನು ದಾಖಲಿಸಬೇಕಾಗಿತ್ತೋ ಅದೇ ಆಧಾರದ ಮೇಲೆ 25.10.2008 ರಂದು ಸಂಜೆ 4.30 ಗಂಟೆಗೆ ಗಂಗಾಬಾಯಿಯು ಸಲ್ಲಿಸಿದ ವಿವರವಾದ ಪ್ರಥಮ ಮಾಹಿತಿಯನ್ನು ಆತನೇ ಬರೆದಿದ್ದಾನೆ. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿ ಶ್ರೀ ಮನ್ವೇಂದ್ರ ರೆಡ್ಡಿಯು ಸರಿಯಾಗಿಯೇ ಗುರುತಿಸಿರುವಂತೆ ಕಿಟ್ಟುಗೆ ಬೆದರಿಕೆಯಿತ್ತು ಎಂಬ ಬಗ್ಗೆ ಶ್ರೀಮತಿ ಗಂಗಾಬಾಯಿ ದಾಖಲಿಸಿದ ದೂರಿನಲ್ಲಿ ಒಂದು ಪಿಸುಮಾತೂ ಕೂಡ ಇರುವುದಿಲ್ಲ. ಕಿಟ್ಟು ಕೂಡ ಒಬ್ಬ ವೃತ್ತಿನಿರತ ನ್ಯಾಯವಾದಿ ಮತ್ತು ಬುದ್ಧಿವಂತ ವ್ಯಕ್ತಿಯೆಂದು ಒಪ್ಪಲಾಗಿದೆ. ಆತನ ಜಾತಿಯ ಹೆಸರೆತ್ತಿ ನಿಂದಿಸಲಾಯಿತೆಂದು ಹೇಳಲಾದ ಘಟನೆ ನಡೆದ ಮೂರು ದಿವಸಗಳ ನಂತರ ವಿಜಯಪುರದ ನ್ಯಾಯಾಲಯದ ಮುಂದೆ ಖಾಸಗಿ ದೂರನ್ನು ಸಲ್ಲಿಸಲಾಗಿದೆ. ಹಾಗೆ ದೂರು ನೀಡುವಲ್ಲಿ ಆದ ತೀವ್ರತರವಾದ ವಿಳಂಬವು ಮೊಕದ್ದಮೆಯ ತಳಪಾಯವನ್ನೇ ಸಂಪೂರ್ಣವಾಗಿ ದುರ್ಬಲಗೊಳಿಸುತ್ತದೆ, ಹಾಗಾಗಿ ನ್ಯಾಯಾಲಯವು ಸಾಕ್ಷ್ಯವನ್ನು ಮೌಲ್ಯಮಾಪನ ಮಾಡುವಾಗ ಅದನ್ನೂ ಅದರ ಒಟ್ಟು ಭಾಗವಾಗಿ ಪರಿಗಣಿಸಬೇಕಾಗುತ್ತದೆ. ಆಪಾದಿಸಲಾದ ಘಟನೆಯು 25.10.2008 ರಂದು ಪೊಲೀಸ್ ಠಾಣೆಯಲ್ಲಿ ನಡೆಯಿತೆಂದು ಹೇಳಲಾಗಿದ್ದರೂ, ದೂರನ್ನು ಸಲ್ಲಿಸುವಲ್ಲಿ ಆದ ವಿಳಂಬದ ಬಗ್ಗೆ ಉಲ್ಲೇಖ ಇಲ್ಲವೇ ಇಲ್ಲ. ಬ್ಯಾಂಕ್ ಮ್ಯಾನೇಜರ್‌ನ ವಿರುದ್ಧ ಕ್ರೈಂ ನಂ. 252/08 ರಲ್ಲಿ ಮೊಕದ್ದಮೆಯನ್ನು ದಾಖಲಿಸಿರುವುದು 'ಬಿ' ವರದಿ ಸಲ್ಲಿಸುವುದರೊಂದಿಗೆ ಪರ್ಯಾವಸಾನವಾಗಿದ್ದು ಅದನ್ನು ಸಂಬಂಧಪಟ್ಟ ನ್ಯಾಯಾಲಯವು ಸಮ್ಮತಿಸಿತು. ಇದರ ಜೊತೆಗೆ, 01.10.2009 ರಂದು ಫಿರ್ಯಾದಿಯ ಪ್ರತಿಜ್ಞಾ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಯಿತು. ದೂರು 28.10.2008 ರಂದು ದಾಖಲಾಗಿದ್ದು, ದೂರುದಾರನು ತನ್ನ ಪ್ರತಿಜ್ಞಾ ಹೇಳಿಕೆಯನ್ನು ದಾಖಲಿಸುವುದಕ್ಕೆ ಹಾಜರಾಗಲು 23 ಮುಂದೂಡಿಕೆಗಳನ್ನು ತೆಗೆದುಕೊಂಡಿದ್ದಾನೆ.

15. ಮಾನ್ಯ ನ್ಯಾಯಧೀಶರು 8-10 ಮುಂದೂಡಿಕೆಗಳ ನಂತರ ಸೂಕ್ತವೆನ್ನಬಹುದಾದ ಆದೇಶಗಳನ್ನು ಹೊರಡಿಸಿದರು ಮತ್ತು ವಿಷಯವನ್ನು ವಾದ-ವಿವಾದ ವಿಚಾರಣೆಗಳಿಗಾಗಿ 24.06.2011ಕ್ಕೆ ಗೊತ್ತುಪಡಿಸಲಾಯಿತು. ಫಿರ್ಯಾದಿಯು ಬಹುತೇಕ ಎಲ್ಲಾ ಅಹವಾಲು ವಿಚಾರಣೆಗಳಿಗೂ ಗೈರುಹಾಜರಾಗಿ ಕೊನೆಗೆ 23.01.2015 ರಂದು ಹಾಜರಾಗಿದ್ದು ಮುಂದಿನ ವಾದ-ವಿವಾದ ವಿಚಾರಣೆಗಳನ್ನು ನಡೆಸಲಾಯಿತು. ಸಂಜ್ಞೇಯತೆಯನ್ನು ತೆಗೆದುಕೊಂಡಿರುವುದಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಾದಗಳನ್ನು ಮಂಡಿಸಲು ಫಿರ್ಯಾದಿಗೆ 30-40 ಅಹವಾಲು ವಿಚಾರಣೆಗಳು ಬೇಕಾಯಿತು. ಆಪಾದಿತನ ವಿರುದ್ಧದ ಮೊಕದ್ದಮೆಯು ಲಂಬಿಸಿರುವುದಕ್ಕೆ ಸಂಬಂಧಿಸಿದಂತೆ ಆತನ ವರ್ತನೆಯೇ ಸಾಕಷ್ಟು ಹೇಳುತ್ತದೆ. 28.10.2008 ರಂದು ದಂಡ ಪ್ರಕ್ರಿಯಾ ಸಂಹಿತೆಯ 200ನೇ ಪ್ರಕರಣದೊಂದಿಗೆ ಓದಿಕೊಂಡಂತೆ 2(ಡಿ) ಪ್ರಕರಣದ ಅಡಿಯಲ್ಲಿ ದಾಖಲಿಸಿದ ದೂರಿನಲ್ಲಿಯೇ, ಫಿರ್ಯಾದಿಯು ಸ್ವತಃ ಕರ್ತೃವಾಗಿದ್ದ, ಗಂಗಾಬಾಯಿಯು ದಾಖಲಿಸಿದ ಪ್ರಥಮ ಮಾಹಿತಿಯನ್ನು ಆಧರಿಸಿ ಕ್ರೈಂ ನಂ. 252/08 ರಲ್ಲಿ ಮೊಕದ್ದಮೆಯು ದಾಖಲಾಗಿರುವ ಬಗ್ಗೆ ಫಿರ್ಯಾದಿಯು ಯಾವ ಉಲ್ಲೇಖವನ್ನು ಮಾಡಿಲ್ಲ. ವಿಶೇಷ ನ್ಯಾಯಾಲಯದ ಮುಂದೆ ಸಲ್ಲಿಸಿದ ದೂರು ಮತ್ತು 24.01.2015 ರಂದು ಹೊರಡಿಸಿದ ಆದೇಶವೇ 6ನೇ ಆಪಾದಿತನು ಪೋಲೀಸ್ ಠಾಣೆಯಲ್ಲಿ ಹಾಜರಿರಲೇ ಇಲ್ಲ ಎಂಬುದನ್ನು ಹೊರಹಾಕುತ್ತವೆ. ವಾಸ್ತವವಾಗಿ ಕ್ರೈಂ ನಂ. 252/08ರಲ್ಲಿ ಮೊಕದ್ದಮೆಯನ್ನು ದಾಖಲಿಸಿದ್ದು ಸಂಜೆ 4.30 ಗಂಟೆಗೆ ಹೊರತು ಆಪಾದಿಸಲಾದಂತೆ ಸಂಜೆ 6.30 ಗಂಟೆಗಲ್ಲ. ವಾಸ್ತವವಾಗಿ 1 ಮತ್ತು 2 ನೇ ಆಪಾದಿತರು ಕ್ರೈಂ ನಂ. 252/08 ರಲ್ಲಿ ಶ್ರೀಮತಿ ಗಂಗಾಬಾಯಿ ದಾಖಲಿಸಿದ ಪ್ರಥಮ ಮಾಹಿತಿಯನುಸಾರ ಮೊಕದ್ದಮೆಯನ್ನು ದಾಖಲಿಸುವಲ್ಲಿ ತಮ್ಮ ಅಧಿಕೃತ ಕರ್ತವ್ಯವನ್ನು ನಿರ್ವಹಿಸಿದ್ದಾರೆ.

16. ಮೂಲತಃ ಈ ವಿವಾದವು, ಮೋಟಾರು ಅಪಘಾತದಲ್ಲಿ ಆದ ಗಂಗಾಬಾಯಿಯ ಮಗನ ಸಾವಿನ ಸಂಬಂಧದ ಮೊತ್ತವು ದುರುಪಯೋಗವಾಗಿದೆ ಎಂದು ಆಪಾದಿಸಲಾಗಿರುವುದಕ್ಕೆ ಸಂಬಂಧಿಸಿದಂತೆ ವೃತ್ತಿಪರ ನ್ಯಾಯವಾದಿ ಎಂ.ಡಿ. ಕುಂಬಾರ್ ಮತ್ತು ಗಂಗಾಬಾಯಿ ನಡುವಿನ ವಿವಾದವಾಗಿದೆ. ಆತನು ಫಿರ್ಯಾದಿಯ

ಸೇವೆಗಳನ್ನು ಮಾಡಲು ಕೋರಿ ವಿವರವಾಗಿ ದೂರಿನ ಕರಡು ತಯಾರಿಸುವ ಮೂಲಕ ಕಾನೂನು ನೆರವನ್ನು ನೀಡಿದ್ದಾನೆ. ಕ್ರೈಂ ನಂ. 252/08 ರಲ್ಲಿ ಕ್ರಿಮಿನಲ್ ಮೊಕದ್ದಮೆಯನ್ನು 25.10.2008 ರಂದು ಸಂಜೆ 4.30 ಗಂಟೆಗೆ ದಾಖಲು ಮಾಡಿರುವ ಹಿನ್ನೆಲೆಯಲ್ಲಿ 1 ಮತ್ತು 2ನೇ ಆಪಾದಿತರು ಸಂಜೆ 5.00 ಗಂಟೆಗೆ ಪೊಲೀಸ್ ಠಾಣೆಗೆ ವಾಪಸ್ ಬಂದರು ಎಂಬ ಫಿರ್ಯಾದಿಯ ಪ್ರತಿಪಾದನೆಯು ಸುಳ್ಳಾಗುತ್ತದೆ.

17. ಇದರ ಜೊತೆಗೆ, 25.10.2008 ರಂದು ಯಾವ ಆಧಾರದ ಮೇಲೆ ಕ್ರೈಂ ನಂ. 253/08 ರಲ್ಲಿ ಮೊಕದ್ದಮೆಯನ್ನು ದಾಖಲಿಸಲಾಗಿತ್ತೋ ಆ ಆಧಾರದ ಮೇಲೆ 25.10.2008 ರಂದೇ ಮಧ್ಯಾಹ್ನ 3.30 ಗಂಟೆಗೆ ಸದರಿ ನ್ಯಾಯವಾದಿ ಕಿಟ್ಟುವಿನ ವಿರುದ್ಧ ಮೂರನೇ ಆಪಾದಿತ ನ್ಯಾಯವಾದಿ ಮಲ್ಲಪ್ಪ ಕುಂಬಾರ್ ಮುದ್ದೇಬಿಹಾಳ್ ಪೊಲೀಸ್ ಠಾಣೆಯಲ್ಲಿ ಪ್ರಥಮ ಮಾಹಿತಿಯನ್ನು ದಾಖಲಿಸಿದ್ದನು. ಇದು ಪಿಸಿಆರ್ 6/08 (ವಿಶೇಷ ಸಿಸಿ 6/15) ರಲ್ಲಿ ಕಂಡುಬರುವ ದಾಖಲೆಗಳಿಂದ ಸ್ಪಷ್ಟವಾಗುತ್ತದೆ. ಶ್ರೀ ಮನ್ವೇಂದ್ರರೆಡ್ಡಿಯವರು ಸರಿಯಾಗಿಯೇ ಗುರುತಿಸಿರುವಂತೆ, 28.10.2008 ರಂದು ಪಿಸಿಆರ್ 6/08 ಅನ್ನು ದಾಖಲಿಸಿರುವುದು ಫಿರ್ಯಾದಿ–ಕಿಟ್ಟು ವಿರುದ್ಧ ದಾಖಲಾದ ಮೊಕದ್ದಮೆ ಕ್ರೈಂ ನಂ. 253/08 ಕ್ಕೆ ಮಾಡಿದ ಪ್ರತ್ಯಾಘಾತವಾಗಿದೆ.

18. ಮಾನ್ಯ ನ್ಯಾಯಾಧೀಶರು ಸಂಜ್ಞೇಯತೆಯನ್ನು ತೆಗೆದುಕೊಳ್ಳುವಾಗ ಈ ಎಲ್ಲಾ ಪ್ರಮುಖ ಸಾಕ್ಷ್ಯಾಧಾರ ಅಂಶಗಳನ್ನು ಪರಿಶೀಲಿಸಿಲ್ಲ. ಫಿರ್ಯಾದಿ ಮಾತ್ರವೇ ಸಲ್ಲಿಸಿರುವ ಎಲ್ಲಾ ದಸ್ತಾವೇಜುಗಳನ್ನು ಮತ್ತು ಮುಖ್ಯ ಘಟನೆಗಳ ವಿವರಗಳನ್ನು ಮಾನ್ಯ ನ್ಯಾಯಾಧೀಶರು ಪರಿಶೀಲಿಸುವುದು ಸಂಜ್ಞೇಯತೆಯನ್ನು ತೆಗೆದುಕೊಳ್ಳುವ ಅವಕಾಶವನ್ನು ಕಲ್ಪಿಸುವುದಿಲ್ಲ.

19. ಫಿರ್ಯಾದಿಯು ಹಾಗೆ ಸಲ್ಲಿಸಿದ ಖಾಸಗಿ ದೂರು ಹಗೆ ತೀರಿಸಿಕೊಳ್ಳುವುದಷ್ಟೇ ಹೊರತು ಮತ್ತೇನೂ ಅಲ್ಲ ಎಂದು ಅರ್ಜಿದಾರ ಪರ ಮಾನ್ಯ ನ್ಯಾಯವಾದಿಯು ವಾದಿಸಿದ್ದಾರೆ. ಸದರಿ ವಾದದಲ್ಲಿ ತುಂಬಾ ಬಲವಿರುವಂತೆ

ಕಂಡುಬರುತ್ತದೆ. ವಾಸ್ತವವಾಗಿ, ಜವಾಬ್ದಾರಿಯುತ ಪೊಲೀಸ್ ಅಧಿಕಾರಿಗಳಾಗಿರುವ 1 ಮತ್ತು 2 ನೇ ಆಪಾದಿತರು ಶ್ರೀಮತಿ ಗಂಗಾಬಾಯಿಯು ಸಲ್ಲಿಸಿದ ಪ್ರಥಮ ಮಾಹಿತಿಯನ್ನು ಸ್ವೀಕರಿಸಿ, ಪ್ರಕರಣವನ್ನು ದಾಖಲಿಸಿಕೊಂಡು, ಮಾನ್ಯ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಎಫ್‌ಐಆರ್ ಸಲ್ಲಿಸುವ ಮೂಲಕ ತಮ್ಮ ಕರ್ತವ್ಯವನ್ನು ನಿರ್ವಹಿಸಿದ್ದಾರೆ. ವಿಶೇಷ ನ್ಯಾಯಾಲಯದ ಮುಂದೆ ದಾಖಲಿಸಿರುವ ಸಾಕ್ಷ್ಯಾಧಾರಗಳ ಹಿನ್ನೆಲೆಯಲ್ಲಿ ಇಡೀ ದೂರನ್ನು ಓದಿದರೂ ಕೂಡ ಅಪರಾಧ ನಿರ್ಣಯವಾಗುವಂತ ಸಾಧ್ಯತೆ ತುಂಬಾ ದೂರವೇ ಇದೆ. ಜೊತೆಗೆ ಈ ಪ್ರಕ್ರಿಯೆಯಲ್ಲಿ ನ್ಯಾಯಾಲಯದ ಅಮೂಲ್ಯ ಸಮಯವು ಹಾಳಾಗುತ್ತದೆ. ವಿಷಯದ ಈ ಹಿನ್ನೆಲೆಯಲ್ಲಿ, ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಅಡಿಯಲ್ಲಿ ಈ ನ್ಯಾಯಾಲಯಕ್ಕೆ ನಿಹಿತವಾಗಿರುವ ಅಧಿಕಾರವನ್ನು ಬಳಸುವುದಕ್ಕೆ ಮತ್ತು ಫಿರ್ಯಾದಿಯು ಜರುಗಿಸಿದ ಕ್ರಿಮಿನಲ್ ವ್ಯವಹರಣೆಗಳನ್ನು ರದ್ದುಪಡಿಸುವುದಕ್ಕೆ ಇದು ತಕ್ಕ ಮೊಕದ್ದಮೆಯಾಗಿದೆ.

20. ತತ್ಪರಿಣಾಮವಾಗಿ ಈ ಕೆಳಕಂಡ ಆಜ್ಞೆಯನ್ನು ಹೊರಡಿಸಲಾಗಿದೆ:

**ಆಜ್ಞೆ**

ಅರ್ಜಿಯನ್ನು ಪುರಸ್ಕರಿಸಲಾಗಿದೆ. ಪಿಸಿಆರ್ 6/08 ರಲ್ಲಿ ವಿಜಯಪುರದ 2ನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಜರುಗಿಸಿದ ಕ್ರಿಮಿನಲ್ ವ್ಯವಹರಣೆಗಳನ್ನು ರದ್ದುಗೊಳಿಸಲಾಗಿದೆ.

---